155ಎಲ್6 ನಿ-72-(102)
4KK
28/07/24

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎ. ವಸಂತಕುಮಾರ ಇವರು ನಿಯಮ 72 ರಡಿ ನೀಡಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ : 102 ಕ್ಕೆ ಉತ್ತರ

ಪ್ರಶ್ನೆ :-

ರಾಯಚೂರು ಜಿಲ್ಲೆಯಲ್ಲಿ ಹೊಸ ಕೈಗಾರಿಕೆ ನಿರ್ಮಿಸಿ ಒಂದೆಡೆ ಆರ್ಥಿಕ ಅಭಿವೃದ್ಧಿ ಇನ್ನೊಂದೆಡೆ ಉದ್ಯೋಗ ಸೃಷ್ಟಿ ಮಾಡುವ ಉದ್ದೇಶದಿಂದ ಸಾವಿರಾರು ಎಕರೆ ಭೂಮಿಯನ್ನು ಕೆಐಎಡಿಬಿ ಮೂಲಕ ರೈತರಿಂದ ಸ್ವಾಧೀನಪಡಿಸಿಕೊಂಡು, ನೂರಾರು ಎಕರೆ ಭೂಮಿಯನ್ನು ಕೈಗಾರಿಕೆಗಾಗಿ ಖರೀದಿಸಲು ಸುರಾನ ಇಂಡಸ್ಟ್ರೀಸ್, ರಾಯಚೂರು ಇವರಿಗೆ ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961 ಕಲಂ 109 ರ ಅಡಿ ಪರವಾನಿಗೆಯನ್ನು ನೀಡಿರುತ್ತದೆ. ವಿವಿಧ ವಿನಾಯಿತಿ ನೀಡಿ ಸರ್ಕಾರ 131 ಎಕರೆ ಭೂಮಿ ನೀಡಿದ್ದು ಆದರೆ, ಕಂಪನಿಯವರು ಪಡೆದ ಉದ್ದೇಶಕ್ಕೆ ಬಳಸದೆ, ಕಂಪನಿ ರೋಗಗ್ರಸ್ಥ ಎಂದು ಪ್ರಮಾಣ ಪತ್ರ ಪಡೆಯಲು ಹಿಂದಿನ ಜಿಲ್ಲಾಧಿಕಾರಿಗೆ ಪತ್ರ ಬರೆದಿತ್ತು. ಭೂಮಿ, ನೀರು ಸೇರಿ ಅನೇಕ ಸೌಲಭ್ಯ ವಿನಾಯಿತಿ ಪಡೆದರೂ ಈಗ ಕಂಪನಿ ಬಂದ್ ಆಗಿದೆ. ಭೂಮಿಯನ್ನೇ ಅಡವಿಟ್ಟು ಮಾರಾಟ ಮಾಡಲಾಗಿದೆ.

ಯಾವುದೇ ಕೈಗಾರಿಕೆ ಮುಚ್ಚುವ ಮುನ್ನ ಸಾರ್ವಜನಿಕ ಸಭೆ ನಡೆಸಬೇಕಿತ್ತು ಅಥವಾ ಜಿಲ್ಲಾಧಿಕಾರಿ ಅಧ್ಯಕತೆ ಏಕಗವಾಕ್ಷಿ ಸಭೆಯಲ್ಲಿ ಚರ್ಚಿಸಿ ಈ ಬಗ್ಗೆ ನಿರ್ಧರಿಸಬೇಕು. ಆದಾವುದನ್ನೂ ಮಾಡದೆ ಕಂಪನಿಯ ಮಾಲೀಕರು ಕಾರ್ಮಿಕರನ್ನು ಬೀದಿಗೆ ಹಾಕಿ ಭೂಮಿ ಮಾರಾಟ ಮಾಡಿ ಲಾಭ ಮಾಡಿಕೊಂಡಿದ್ದಾರೆ. ಮತ್ತೊಂದೆಡೆ 12 ಬ್ಯಾಂಕ್‌ಗಳಲ್ಲಿ 1301 ಕೋಟಿ ಸಾಲ ಪಡೆದು ಮರು ಪಾವತಿಸದೆ ಕೈಗಾರಿಕೆ ಮುಚ್ಚಿದ್ದರ ಕಾರಣ ಆ ಬಗ್ಗೆ ಸಿ.ಬಿ.ಐ. ತನಿಖೆ ಮಾಡುತ್ತಿದೆ. ಯಾವ ಉದ್ದೇಶಕ್ಕೆ ಭೂಮಿ ಪಡೆದಿದೆಯೋ ಅದೇ ಉದ್ದೇಶಕ್ಕೆ ಭೂಮಿ ಬಳಕೆ ಮಾಡಬೇಕು ಎನ್ನುವ ನಿಯಮ ಪಾಲಿಸಿಲ್ಲ.

ಆದ್ದರಿಂದ ಸದರಿ ಪ್ರಕರಣವನ್ನು ತುರ್ತು ಪ್ರಕರಣವೆಂದು ಪರಿಗಣಿಸಿ ಸುರಾನ ಕಂಪನಿಯ ಎಲ್ಲಾ ಭೂಮಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಮಾನ್ಯ ಸಚಿವರಿಗೆ ಸದನದ ಮೂಲಕ ಗಮನ ಸೆಳೆಯ ಬಯಸುತ್ತೇನೆ.

ಉತ್ತರ:-

1. ದಿನಾಂಕ 06.06.2005 ರಂದು ನಡೆದ ರಾಜ್ಯ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ, M/s.Surana Industries Ltd., ಕಂಪನಿಯ Integrated Steel Plant ಯೋಜನೆಗೆ ರಾಯಚೂರು ಗ್ರೋತ್ ಸೆಂಟರ್ ಕೈಗಾರಿಕಾ ಪ್ರದೇಶ, ರಾಯಚೂರು ಜಿಲ್ಲೆ ಇಲ್ಲಿ 300 ಎಕರೆ ಜಮೀನನ್ನು ಕೆಐಎಡಿಬಿ ವತಿಯಿಂದ ಹಂಚಿಕೆ ಮಾಡಲು ಯೋಜನೆ ಅನುಮೋದಿಸಿರುತ್ತದೆ.
2. ಮಂಡಳಿಯು M/s.Surana Industries Ltd., ಕಂಪನಿಗೆ ದಿನಾಂಕ: 14.03.2006 ರಂದು ರಾಯಚೂರು ಗ್ರೋತ್ ಸೆಂಟರ್ ಕೈಗಾರಿಕಾ ಪ್ರದೇಶ, ರಾಯಚೂರು ಇಲ್ಲಿನ ನಿವೇಶನ ಸಂಖ್ಯೆ: 231, 232, 233 & 234 ರಲ್ಲಿ 164.53 ಎಕರೆ ಜಮೀನನ್ನು ಹಂಚಿಕೆ ಮಾಡಿದ್ದು, ದಿನಾಂಕ:05.09.2006 ರಂದು ಜಮೀನಿಗೆ ಸ್ವಾಧೀನ ಪತ್ರವನ್ನು ನೀಡಿ, ದಿನಾಂಕ: 07.09.2006 ರಂದು 06 ವರ್ಷಗಳ ಅವಧಿಗೆ ಗುತ್ತಿಗೆ ಮತ್ತು ಮಾರಾಟ ಒಡಂಬಡಿಕೆ ಕರಾರನ್ನು ನೆರವೇರಿಸಿರುತ್ತದೆ.

3. M/s.Surana Industries Ltd., ಕಂಪನಿಯು ಪ್ರಸ್ತಾವಿತ ಜಮೀನಿಗೆ ಸಂಬಂಧಿಸಿದಂತೆ ಈ ಕೆಳಕಂಡ ಹಣಕಾಸು ಸಂಸ್ಥೆ / ಬ್ಯಾಂಕುಗಳಿಂದ ಸಾಲ ಪಡೆಯುವ ಸಲುವಾಗಿ ಮಂಡಳಿಯು ದಿನಾಂಕ:28.09.2006 ರಂದು ನಿರಾಕ್ಷೇಪಣಾ ಪತ್ರ ನೀಡಿರುತ್ತದೆ:

- ಬ್ಯಾಂಕ್ ಆಫ್ ಮಹಾರಾಷ್ಟ್ರ
- ಐಡಿಬಿಐ
- ಸೆಂಟ್ರಲ್ ಬ್ಯಾಂಕ್
- ಸಿಂಡಿಕೇಟ್ ಬ್ಯಾಂಕ್
- ಓರಿಯಂಟಲ್ ಬ್ಯಾಂಕ್
- ಇಂಡಿಯನ್ ಓವರ್‌ಸೀಸ್ ಬ್ಯಾಂಕ್
- ಬ್ಯಾಂಕ್ ಆಫ್ ಇಂಡಿಯಾ
- ಅಲಹಾಬಾದ್ ಬ್ಯಾಂಕ್

4. ಮಂಡಳಿಯು ದಿನಾಂಕ: 04.04.2007 ರಂದು M/s. Surana Industries Ltd., ಕಂಪನಿಗೆ ರಾಯಚೂರು ಗ್ರೋತ್ ಸೆಂಟರ್ ಕೈಗಾರಿಕಾ ಪ್ರದೇಶ, ರಾಯಚೂರು ಇಲ್ಲಿನ ನಿವೇಶನ ಸಂಖ್ಯೆ:229-A & 230 ರಲ್ಲಿ 93.53 ಎಕರೆ ಮತ್ತು ದಿನಾಂಕ: 07.05.2008 ರಂದು ನಿವೇಶನ ಸಂಖ್ಯೆ: 213 & 214 ರಲ್ಲಿ 41.92 ಎಕರೆ ವಿಸ್ತೀರ್ಣದ ಜಮೀನನ್ನು ಹೆಚ್ಚುವರಿಯಾಗಿ ಹಂಚಿಕೆ ಮಾಡಿರುತ್ತದೆ. ಈ ಜಮೀನಿಗೆ ದಿನಾಂಕ:19.05.2007 ರಂದು ಸ್ವಾಧೀನ ಪತ್ರ ನೀಡಿದ್ದು, ದಿನಾಂಕ:24.05.2007 ರಂದು ಗುತ್ತಿಗೆ ಒಡಂಬಡಿಕೆ ಕರಾರನ್ನು ನೆರವೇರಿಸಿರುತ್ತದೆ.

5. ಕಂಪನಿಯು ಸದರಿ ಹೆಚ್ಚುವರಿ ಜಮೀನುಗಳಿಗೆ ಸಂಬಂಧಿಸಿದಂತೆ M/s. Uco Bank ಮತ್ತು M/s. IDBI Trusteeship Services Ltd., ಇವರಿಂದ ಸಾಲ ಪಡೆಯುವ ಸಲುವಾಗಿ ದಿನಾಂಕ: 19.03.2010 ರಂದು ನಿರಾಕ್ಷೇಪಣಾ ಪತ್ರ ನೀಡಿರುತ್ತದೆ.

6. ಮಂಡಳಿಯು ಒಟ್ಟು 314.15 ಎಕರೆ ವಿಸ್ತೀರ್ಣದ ಜಮೀನನ್ನು M/s. Surana Industries Ltd., ರವರ ಹೆಸರಿಗೆ ಹಂಚಿಕೆ ಮಾಡಿರುತ್ತದೆ.

7. ದಿನಾಂಕ:24.06.2009 ರಂದು ನಡೆದ ರಾಜ್ಯ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ M/s.Surana Power Ltd., ಇವರಿಗೆ 435 MW Thermal Power Plant ಸ್ಥಾಪಿಸಲು ರಾಯಚೂರು ಗ್ರೋತ್ ಸೆಂಟರ್ ಕೈಗಾರಿಕಾ ಪ್ರದೇಶ, ರಾಯಚೂರು ಇಲ್ಲಿ 179 ಎಕರೆ ಭೂಮಿಯನ್ನು ಕೆಐಎಡಿಬಿ ವತಿಯಿಂದ ಹಂಚಿಕೆ ಮಾಡಲು ಯೋಜನೆ ಅನುಮೋದನೆಯಾಗಿರುತ್ತದೆ.

8. M/s. Surana Industries Ltd., ಕಂಪನಿಯು ರಾಯಚೂರು ಗ್ರೋತ್ ಸೆಂಟರ್ ಕೈಗಾರಿಕಾ ಪ್ರದೇಶ, ರಾಯಚೂರು ಇಲ್ಲಿ ಹಂಚಿಕೆ ಪಡೆದಿದ್ದ ಒಟ್ಟು 314.15 ಎಕರೆ ಜಮೀನಿನ ಪೈಕಿ, ನಿವೇಶನ ಸಂಖ್ಯೆ: 231, 232-P, 233 & 234 ರಲ್ಲಿ 131.55 ಎಕರೆ ಜಮೀನನ್ನು ತಮ್ಮ ಹೆಸರಿನಲ್ಲಿಯೇ ಉಳಿಸಿಕೊಂಡು, ನಿವೇಶನ ಸಂಖ್ಯೆ:232, 229, 213-P, 214-P, 47-P & 48 ರಲ್ಲಿನ 182.60 ಎಕರೆ ಜಮೀನನ್ನು M/s.Surana Power Ltd., ಕಂಪನಿಯ ಹೆಸರಿಗೆ ವರ್ಗಾಯಿಸಿರುತ್ತದೆ. ಈ ಸಂಬಂಧ ವಿವಿದ ದಿನಾಂಕಗಳಂದು ಪೂರಕ ಗುತ್ತಿಗೆ ಒಡಂಬಡಿಕೆ ಕರಾರುಗಳನ್ನು ನೆರವೇರಿಸಲಾಗಿರುತ್ತದೆ.

9. M/s.Surana Power Ltd., ಕಂಪನಿಯು ರಾಯಚೂರು ಗ್ರೋತ್ ಸೆಂಟರ್ ಕೈಗಾರಿಕಾ ಪ್ರದೇಶ ಇಲ್ಲಿನ ನಿವೇಶನ ಸಂಖ್ಯೆ:232, 229, 213-P, 214-P, 47-P & 48 ರಲ್ಲಿ ಹಂಚಿಕೆ ಮಾಡಲಾಗಿದ್ದ

ಜಮೀನಿನಲ್ಲಿ ನಿಗದಿತ ಅವಧಿಯೊಳಗಾಗಿ ಯೋಜನೆಯನ್ನು ಅನುಷ್ಠಾನಗೊಳಿಸದೇ ಇದ್ದ ಸಲುವಾಗಿ ಮಂಡಳಿಯು ಕೆ.ಐ.ಎ.ಡಿ. ಕಾಯಿದೆ 1966ರ ಕಲಂ 34-ಬಿ ರಡಿ ವಿಚಾರಣೆ ನಡೆಸಿ ಜಮೀನಿನ ಹಂಚಿಕೆಯನ್ನು ರದ್ದು ಮಾಡಿ ಸ್ವಾಧೀನವನ್ನು ಮಂಡಳಿಯ ವಶಕ್ಕೆ ಹಿಂಪಡೆಯಲು ದಿನಾಂಕ:14.09.2016 ರಂದು ಆದೇಶ ಹೊರಡಿಸಿರುತ್ತದೆ.

10. ಆದರೆ, ನಂತರದಲ್ಲಿ ಬ್ಯಾಂಕ್ ಅಧಿಕಾರಿಗಳು ಸದರಿ ಜಮೀನನ್ನು ಮಂಡಳಿಯ ವಶಕ್ಕೆ ಪಡೆಯಲು ಅಡ್ಡಿ ಉಂಟು ಮಾಡಿದ್ದು, ಕಂಪನಿಯು ಹಣಕಾಸು ಸಂಸ್ಥೆ / ಬ್ಯಾಂಕುಗಳಿಂದ ಪಡೆದ ಸಾಲಗಳನ್ನು ಮರುಪಾವತಿ ಮಾಡುವಲ್ಲಿ ವಿಫಲರಾದ ಸಲುವಾಗಿ NCLT, Chennai ಇಲ್ಲಿ MA/453/2018 ರನ್ವಯ ಪ್ರಕರಣ ದಾಖಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

11. In the National Company Law Tribunal, Chennai and in the matter of Insolvency and Bankruptcy Code 2016 and in the matter of M/s. Surana Industries Ltd., (in liquidation) MA/453/2018 in TCP/95/IB/CB/2017 ಪ್ರಕರಣದಲ್ಲಿ ಮಂಡಳಿಯು M/s. Surana Industries Ltd., ಇವರಿಗೆ ರಾಯಚೂರು ಗ್ರೋತ್ ಸೆಂಟರ್ ಕೈಗಾರಿಕಾ ಪ್ರದೇಶ, ರಾಯಚೂರು ಇಲ್ಲಿನ ನಿವೇಶನ ಸಂಖ್ಯೆ: 231, 232- P, 233 & 234 ರಲ್ಲಿ ಹಂಚಿಕೆ ಮಾಡಲಾಗಿದ್ದ 131.53 ಎಕರೆ ವಿಸ್ತೀರ್ಣದ ಜಮೀನಿಗೆ ಸಂಬಂಧಿಸಿದಂತೆ M/s. Texcon Steels Ltd., ಸಂಸ್ಥೆಯು Official Liquidator ರವರು ನಡೆಸಲಾದ ಹರಾಜು ಪ್ರಕ್ರಿಯೆಯಲ್ಲಿ ಹೆಚ್ಚುವರಿ ಬಿಡ್ಡನ್ನು ಪಾವತಿಸಿ, Successful Bidder ಆದ ಹಿನ್ನೆಲೆಯಲ್ಲಿ ದಿನಾಂಕ: 30.11.2022 ರಂದು Official Liquidator of M/s.Surana Industries Ltd., ರವರು M/s.Texcon Steels Ltd., ಸಂಸ್ಥೆಗೆ ಸದರಿ ಜಮೀನಿನ Sale Certificate ನೀಡಿರುತ್ತಾರೆ.

12. ದಿನಾಂಕ: 28.11.2023 ರಂದು ನಡೆದ 141ನೇ ರಾಜ್ಯಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ M/s. Texcon Steels Ltd., ಇವರು NCLT, Chennai ಸಂಸ್ಥೆಯಿಂದ ರಾಯಚೂರು ಗ್ರೋತ್ ಸೆಂಟರ್ ಕೈಗಾರಿಕಾ ಪ್ರದೇಶ, ರಾಯಚೂರು ಇಲ್ಲಿನ ನಿವೇಶನ ಸಂಖ್ಯೆ: 231, 232-P, 233 & 234 ರಲ್ಲಿ ಖರೀದಿ ಮಾಡಲಾದ 131.53 ಎಕರೆ ಜಮೀನಿನಲ್ಲಿ Manufacturing of Sponge Iron-1,28,000 TPA, Steel Rolled Products–2,00,000 TPA, Captive Power-35 MW ಘಟಕವನ್ನು ಸ್ಥಾಪಿಸಲು ಯೋಜನೆ ಅನುಮೋದನೆ ನೀಡಲಾಗಿರುತ್ತದೆ.

13. ನಂತರ, M/s. Texcon Steels Ltd., ಇವರಿಂದ ಮಂಡಳಿಗೆ ವರ್ಗಾವಣೆ ವೆಚ್ಚ, ನಿರ್ವಹಣಾ ವೆಚ್ಚ ಮತ್ತು ಇತರೆ ಬಾಕಿ ಮೊಬಲಗನ್ನು ಪಾವತಿಸಿಕೊಂಡು, ದಿನಾಂಕ:05.02.2024 ರಂದು ನಿವೇಶನ ಸಂಖ್ಯೆ: 231, 232-P, 233 & 234 ರಲ್ಲಿನ 131.53 ಎಕರೆ ಜಮೀನಿನ ಹಕ್ಕು ವರ್ಗಾವಣೆ ಮಾಡಲಾಗಿರುತ್ತದೆ.

14. ನಂತರ, Debts Recovery Tribunal-1, Chennai ಸಂಸ್ಥೆಯು ರಾಯಚೂರು ಗ್ರೋತ್ ಸೆಂಟರ್ ಕೈಗಾರಿಕಾ ಪ್ರದೇಶ, ರಾಯಚೂರು ಇಲ್ಲಿನ ನಿವೇಶನ ಸಂಖ್ಯೆ: 232 ರಲ್ಲಿ ಹೆಚ್ಚುವರಿ 33.00 ಎಕರೆ ಜಮೀನನ್ನು M/s. Texcon Steels Ltd., ಇವರಿಗೆ ಹಕ್ಕು ವರ್ಗಾವಣೆ ಮಾಡುವ ಸಂಬಂಧ

ದಿನಾಂಕ:03.10.2023 ರಂದು ಪತ್ರ ವಿತರಿಸಿರುತ್ತದೆ. ಅಂದರೆ, M/s. Texcon Steels Ltd., ಇವರಿಗೆ ಒಟ್ಟು 164.53 ಎಕರೆ ಜಮೀನನ್ನು NCLT ಆದೇಶದ ಪ್ರಕಾರ ನೀಡಲಾಗಿದೆ.

15. ಅಲ್ಲದೇ, M/s. Surana Power Ltd., ಕಂಪನಿಗೆ ರಾಯಚೂರು ಗ್ರೋತ್ ಸೆಂಟರ್ ಕೈಗಾರಿಕಾ ಪ್ರದೇಶ, ರಾಯಚೂರು ಇಲ್ಲಿನ ನಿವೇಶನ ಸಂಖ್ಯೆ: 232, 229, 213-P, 214-P, 47-P & 48 ರಲ್ಲಿ ಹಂಚಿಕೆ ಮಾಡಲಾಗಿದ್ದ 181.60 ಎಕರೆ ಜಮೀನನ್ನು ಹಿಂಪಡೆಯುವ ಕುರಿತು ದಿನಾಂಕ:14.09.2016 ರಂದು ಮಂಡಳಿಯು ಕೆ.ಐ.ಎ.ಡಿ. ಕಾಯಿದೆ 1966ರ ಕಲಂ 34-ಬಿ ರಡಿ ಆದೇಶ ಹೊರಡಿಸಿದ್ದು, ಆದರೆ, ಬ್ಯಾಂಕ್ ಅಧಿಕಾರಿಗಳು NCLT, Chennai ಇಲ್ಲಿ MA/453/2018 ರನ್ವಯ ಪ್ರಕರಣ ದಾಖಲಾಗಿರುವುದರಿಂದ ಸದರಿ ಜಮೀನನ್ನು ಮಂಡಳಿಯ ವಶಕ್ಕೆ ಪಡೆಯಲು ಅಡ್ಡಿ ಉಂಟು ಮಾಡಿದ್ದು, ಮಂಡಳಿಯು ಸದರಿ ಜಮೀನನ್ನು ಹಿಂಪಡೆಯಲು ಅನುಮತಿ ಕೋರಿ NCLT, Chennai ಮುಂದೆ MA/28/CHE/2021 ದಾಖಲಿಸಿರುತ್ತದೆ. NCLT, Chennai ರವರು M/s. Surana Power Ltd., ಕಂಪನಿಯ Liquidator ಗೆ ಜಮೀನನ್ನು ತೆರವು ಮಾಡಲು ನಿರ್ದೇಶಿಸಿರುತ್ತಾರೆ.

16. ನಂತರ, IDBI Bank ಮತ್ತು BHEL ರವರು ಮಂಡಳಿಯು ದಾಖಲಿಸಿರುವ MA/28/CHE/2021 ರಲ್ಲಿ ತಮ್ಮನ್ನು Parties ಮಾಡಲು ಅರ್ಜಿ ಸಲ್ಲಿಸಿರುತ್ತಾರೆ. ನಂತರ BHEL ಸಂಸ್ಥೆಯು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ CA ಸಂಖ್ಯೆ: 2938/2020 ರಲ್ಲಿ NCLT ಆದೇಶಕ್ಕೆ ತಡೆಯಾಜ್ಞೆ ಪಡೆದಿರುತ್ತದೆ. ಸದರಿ ಅಂಶವನ್ನು NCLT ಸಂಸ್ಥೆಯು ದಾಖಲೆಗೆ ತೆಗೆದುಕೊಂಡಿದ್ದು, ಪ್ರಕರಣವು ಬಾಕಿ ಇರುತ್ತದೆ. ಸದರಿ ಪ್ರಕರಣವು ಇತ್ಯರ್ಥವಾದ ನಂತರ ಮಾನ್ಯ ನ್ಯಾಯಾಲಯದ ಆದೇಶದನ್ವಯ ಪರಿಶೀಲಿಸಿ, ನಿಯಮಾನುಸಾರ ಕ್ರಮವಹಿಸಲಾಗುತ್ತದೆ.

**ಸಂಖ್ಯೆ: ಸಿಐ 180 ಐಎಪಿ 2025**

(ಎಂ.ಬಿ.ಪಾಟೀಲ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು